ಬಾಗೇಪಲ್ಲಿ ತಾಲ್ಲೂಕಿನಲ್ಲಿರುವ ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವುದು.

106(230) ಶ್ರೀ ಜೆ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ತಾಲ್ಲೂಕಿನ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಮಾಲೀಕಯ್ಯ ಏ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು) :—

ಅ) ಇಲ್ಲ.

ಆ) ಅಗತ್ಯತೆಯನ್ನು ಆಧರಿಸಿ ಕ್ರಮ ಕೈಗೊಳ್ಳಲಾಗುವುದು.

ಕೇಂದ್ರ ಸರ್ಕಾರದ ರೇಷ್ಮೆ ಆಮದು ನೀತಿಯ ಬಗ್ಗೆ.

107(248) ಶ್ರೀ ಜೆ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ರೇಷ್ಮೆ ಆಮದು ನೀತಿಯ ಬಗ್ಗೆ ಸರ್ಕಾರದ ನಿಲುವೇನು?

ಆ) ರೇಷ್ಮೆ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳು ಯಾವುವು?

ಇ) ಆ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು) :—

ಅ) ವಿರೋಧವಿದೆ.

ಆ) ಬೆಲೆಯಲ್ಲಿ ಸ್ವಲ್ಪ ಮಟ್ಟಿಗೆ ಇಳಿತ.

ಇ) 1) ಸರ್ಕಾರಿ ರೇಷ್ಮೆ ಕಾರ್ಖಾನೆಗಳು ಮತ್ತು ಕೆ.ಎಸ್.ಐ.ಸಿ.ಗೂಡನ್ನು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ರೇಷ್ಮೆಯನ್ನು ಖರೀದಿಸುವುದರ ಮೂಲಕ ಬೆಲೆಯನ್ನು ಸ್ಥಿರೀಕರಿಸಲಾಗುತ್ತಿದೆ.

2) ರೇಷ್ಮೆ ಆಮದು ನೀತಿಯನ್ನು ಹಿಂದಕ್ಕೆ ಪಡೆಯಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುತ್ತಿದೆ.

ಸಕಲೇಶಪುರ ಪುರಸಭೆಯ ಮುಖ್ಯಾಧಿಕಾರಿಯ ಅಮಾನತ್ತು.

108(319) ಶ್ರೀ ಬಿ.ಬಿ. ಶಿವಪ್ಪ, (ಸಕಲೇಶಪುರ) ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರದ ಪುರಸಭೆಯಲ್ಲಿ ಇತ್ತೀಚೆಗೆ ಕಾರ್ಯ ನಿರ್ವಹಿಸುತ್ತಿದ್ದ ಮುಖ್ಯಾಧಿಕಾರಿಯವರು ಯಾವ ಯಾವ ಅಪರಾಧಗಳ ಹಿನ್ನೆಲೆಯಲ್ಲಿ ಅಮಾನತ್ತಿಗೆ ಒಳಪಟ್ಟಿರುತ್ತಾರೆ?

ಆ) ಸದರಿ ಅಧಿಕಾರಿಯು ಅಧಿಕಾರ ದುರುಪಯೋಗದ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು) :—

ಅ) ಸಕಲೇಶಪುರ ಪುರಸಭೆಯ ಮುಖ್ಯಾಧಿಕಾರಿಯವರು ಅಕ್ರಮ ಸಂಭಾವನೆ ಪಡೆಯುತ್ತಿದ್ದಾಗ ಲೋಕಾಯುಕ್ತ ಪೋಲೀಸರ ಜಾಲಕ್ಕೆ ಸಿಕ್ಕಿಬಿದ್ದ ಪ್ರಯುಕ್ತ ಅವರನ್ನು ಅಮಾನತ್ತುಗೊಳಿಸಲು ಲೋಕಾಯುಕ್ತ ಕಛೇರಿಯ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ ಘಟಕದ ಮುಖ್ಯಸ್ಥರು ವರದಿ ಮಾಡಿದಂತೆ ಅವರನ್ನು ಲೋಕಾಯುಕ್ತದಿಂದ ತನಿಖೆಗೆ ನಡೆಯುವುದನ್ನು ಬಾಕಿ ಇಟ್ಟು ಪೌರಾಡಳಿತ ನಿರ್ದೇಶಕರು ದಿನಾಂಕ: 5-3-99ರಂದು ಅಮಾನತ್ತುಗೊಳಿಸಿರುತ್ತಾರೆ.

ಆ) ಮೇಲಿನಂತೆ ಉತ್ತರಿಸುತ್ತಾ, ಹಾಗೂ ಸದರಿಯವರು ಹಿಂದೆ ತೀರ್ಥಹಳ್ಳಿ ಪಟ್ಟಣ ಪಂಚಾಯತಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ ಅಧಿಕಾರ ದುರುಪಯೋಗ ಕುರಿತಂತೆ ವಿಚಾರಣಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಇಲಾಖಾ ವಿಚಾರಣೆ ನಡೆಯುತ್ತಿದೆ.